ಆರ್.ಎ. ನಂ.9/2020ರಲ್ಲಿ
ಡಿ.ಡಬ್ಲ್ಯೂ-1(ಗಂಗರಾಜು)

ದಿನಾಂಕ 02-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಶ್ರೀ ಸಿ.ಆರ್.ಎಸ್., ವಕೀಲರಿಂದಃ-

ದಿನಾಂಕ 14.06.1966ರ ಕ್ರಯಪತ್ರವನ್ನು ಅಧಿ ವಿಚಾರಣಾ ನ್ಯಾಯಾಲಯದಲ್ಲಿಯೂ ಸಹ ಹಾಜರುಪಡಿಸಿದ್ದೆ ಎಂದರೆ ಸರಿ. ನಿಡಿ-24ನ್ನು ಬೈರಯ್ಯನಿಗೆ ಲಕ್ಕಯ್ಯರವರು ಬರೆದುಕೊಟ್ಟಿದ್ದಾರೆ. ಸದರಿ ಲಕ್ಕಯ್ಯ ಎದುರುದಾರರಾದ ಉಗ್ರಯ್ಯರವರ ಅಣ್ಣ. ಬೈರಯ್ಯ ನನ್ನ ತಾತ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಇ.ಸಿ.,ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಬೈರಯ್ಯನಿಗೆ ನಾಲ್ಕು ಜನ ಮಕ್ಕಳು, ಅವರೆಂದರೆ ಬೈರಯ್ಯ, ಸಿದ್ದಲಿಂಗಯ್ಯ, ಸಿದ್ದಯ್ಯ ಮತ್ತು ಚಿಕ್ಕವೀರಯ್ಯ. ನಿಡಿ-24ರಡಿ ಖರೀದಿ ಮಾಡಿದ ಆಸ್ತಿಯಲ್ಲಿ 1 ಎಕರೆ 18 ಗುಂಟೆಯನ್ನು ದಿನಾಂಕ 08.04.1991ರಲ್ಲಿ ಎದುರುದಾರರಾದ ಉಗ್ರಯ್ಯನಿಗೆ ಬೈರಯ್ಯನ ಮೂರನೇ ಮಗ ಸಿದ್ದಯ್ಯ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತೇ ಇರಲಿಲ್ಲ, ಈ ಕೇಸು ಹಾಕಿದ ನಂತರ ನಮಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ಸಿದ್ದಯ್ಯ ನನ್ನ ಚಿಕ್ಕಪ್ಪ. 1 ಎಕರೆ 18 ಗುಂಟೆ ಈಗಲೂ ಉಗ್ರಯ್ಯನವರ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ಸರಿ. ಸರ್ವೇ ನಂ.89/1ರಲ್ಲಿ 2 ಎಕರೆ 17 ಗುಂಟೆಯಲ್ಲಿ ನನ್ನ ತಾತ ಬೈರಯ್ಯನ ಹೆಸರಿಗೆ 39 ಗುಂಟೆ ಬರುತ್ತಿದೆ. ಉಗ್ರಯ್ಯನವರು ಅವರಿಗೆ ಸೇರಿದ ಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ, ನಾವು ನಮಗೆ ಸೇರಿದ ಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ.

2. ದಾವಾ ಸ್ವತ್ತಿನಲ್ಲಿ ರಾಮನಗರದಿಂದ ಅರೇಹಳ್ಳಿಗೆ ಹೋಗುವ ರಸ್ತೆ ಹಾದುಹೋಗಿದೆ ಎಂದರೆ ಸರಿ. ಸದರಿ ರಸ್ತೆಯ ಪೂರ್ವಕ್ಕೆ ನಿಮ್ಮ ಸ್ವತ್ತು ಎಂದರೆ ಸಾಕ್ಷಿಯು ನಮ್ಮದು ಪಶ್ಚಿಮಕ್ಕೆ ಇದೆ ಎಂದುಕ ನುಡಿಯುತ್ತಾರೆ. ಸದರಿ ರಸ್ತೆಯ ಪಶ್ಚಿಮಕ್ಕೆ ಇರುವ ಆಸ್ತಿ ಉಗ್ರಯ್ಯನವರ ಆಸ್ತಿ ಎಂದರೆ ಸರಿಯಲ್ಲ. ನಮ್ಮ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ ಈ ಹಿಂದೆ ತಿರುಮಳಯ್ಯನವರ ಆಸ್ತಿ, ಸದರಿ

ಆಸ್ತಿಯನ್ನು ನಾವೇ ಖರೀದಿ ಮಾಡಿದ್ದೇವೆ, ಪಶ್ಚಿಮಕ್ಕೆ ಉಗ್ರಯ್ಯ ಮತ್ತು ನರಸಿಂಹಯ್ಯ, ಉತ್ತರಕ್ಕೆ ಕುಳ್ಳಭೈರಯ್ಯ ಮತ್ತು ದಕ್ಷಿಣಕ್ಕೆ ಮೂಡಲಯ್ಯರವರ ಆಸ್ತಿ ಇವೆ. ಈಗ ಹೇಳಿದ ಚಕ್ಕುಬಂದಿ ರಸ್ತೆಯ ಪೂರ್ವ ದಿಕ್ಕಿಗಿರುವ ಆಸ್ತಿಯ ಚಕ್ಕುಬಂದಿ ಎಂದರೆ ಸರಿಯಲ್ಲ. ರಾಮನಗರದಿಂದ ಅರೇಹಳ್ಳಿಗೆ ಹೋಗುವ ರಸ್ತೆಯ ಪಶ್ಚಿಮಕ್ಕೆ ನಮ್ಮ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನಿಯೋಗಿ ನೇಮಿಸಿಕೊಂಡು ನಮ್ಮ ಆಸ್ತಿಯನ್ನು ನಾವು ಅಳತೆ ಮಾಡಿಸಿಕೊಳ್ಳಲು, ಎದುರುದಾರರ ಆಸ್ತಿಯನ್ನು ಅವರು ಅಳತೆ ಮಾಡಿಸಿಕೊಳ್ಳಲು ನನ್ನ ಅಭ್ಯಂತರ ಇಲ್ಲ. ನಾನು ನನ್ನ ಮಗನ ಮುಖಾಂತರ ಎದುರುದಾರರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ರಾಮನಗರದಿಂದಿ ಅರೇಹಳ್ಳಿಗೆ ಹೋಗುವ ರಸ್ತೆಯ ಪಶ್ಚಿಮಕ್ಕೆ ನಮ್ಮ ಯಾವುದೇ ಆಸ್ತಿ ಇಲ್ಲದಿದ್ದರೂ ಸಹ ಎದುರುದಾರರಿಗೆ ತೊಂದರೆ ಕೊಡುತ್ತಿದ್ದೆ ಆದ್ದರಿಂದ ಅವರು ಕೇಸು ಹಾಕಿದರು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.